# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ

## ಯೇಸು ಮತ್ತು ಲಾಜರನು



ಬರಹಗಾರರು: Edward Hughes
ಚಿತ್ರಲೇಖಕರು: Janie Forest
ಅಳವಡಿಸುವವರು: Ruth Klassen
ಪದ್ಮಾ ಸೈಲೇಸ್: Vinay Shirol
Alastair Paterson

ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada

©2020 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.



ಮರಿಯ ಮತ್ತು ಮಾರ್ಥಳ ತಮ್ಮನಾದ ಲಾಜರನು ರೋಗಿಯಾಗಿರುವುದರಿಂದ ಅವರಿಗೆ ಬಹಳ ನೋವುಂಟಾಯಿತು. ಆತನು ಬೇಗನೆ ಸಾಯಬಹುದೆಂದು ಆಂದುಕೊಂಡರು. ಹಾಗೆಯೇ ಯೇಸುವನ್ನು ಕರೆಯಲು ಯೋಚಿಸಿದರು, ಯೇಸುವು ಬೇತಾನಿಯಲ್ಲಿರುವ ಈ ಕುಟುಂಬವನ್ನು ಬಹಳವಾಗಿ ಪ್ರೀತಿಸುತ್ತಿದ್ದನು.




ಈ ವಿಷಯವು ಯೇಸುವಿಗೆ ತಿಳಿದಾಗ ಆತನು ಶಿಷ್ಯರಿಗೆ ಹೇಳಿದ್ದೆನೆಂದರೆ ಈ
ರೋಗವು ಮರಣಕ್ಕಾಗಿ ಬಂದದಲ್ಲ. ಯೇಸು ಆನೇಕ ಮೈಲಿಗಳ ದೂರದಲ್ಲಿದ್ದರು
ಲಾಜರನಿಗೆ ಏನಾಗುತ್ತದೆ ಎಂದು ತಿಳಿದ್ದಿದನು.
3


ಈ ಸುದ್ದಿ
ತಿಳಿದರು ಬೇತಾನಿಗೆ
ಹೋಗುವುದಕ್ಕೆ ಎರಡು ದಿವಸ
ತಡಮಾಡಿದನು. ಯೇಸು ತನ್ನ ಶಿಷ್ಯರಿಗೆ
ಒಂದು ಗೋಂದಲಮಯವಾದ
ಸಂಗತಿಯನ್ನು ಹೇಳಿದನು.
ಅದೇನೆಂದರೆ ಲಾಜರನು
ಸತ್ತಿದ್ದಾನೆ, ಸಂತೋಷಪಡುತ್ತೆನೆ
ಇದರಿಂದವಾದರು ನೀವು ನಂಬಬಹುದು.
ಈ ಆಶ್ಚರ್ಯಕರವಾದ ಮಾತಿನ
ಆರ್ಥವೇನು? ಯೇಸು ಅಲ್ಲಿ
ಏನನ್ನು ಮಾಡಬಹುದು?
4


ಯೇಸುವು
ಬೇತಾನಿಗೆ ಬರುವಾಗ
ನಾಲ್ಕು ದಿನವಾಗಿತ್ತು
ಸತ್ತ ಶರೀರವನ್ನು ನಾರು
ಬಟ್ಟೆಯಲ್ಲಿ ಸುತ್ತಿ ಒಂದು
ಗುಹೆಯಲ್ಲಿಟ್ಟಿದ್ದರು.
5


ಮಾರ್ಥಳು ಯೇಸುವನ್ನು ಸಂದಿಸಲು ಹೋದಾಗ ಯೇಸುವು ಹೇಳಿದೇನೆಂದರೆ
ನಿಮ್ಮ ಸಹೋದರನು ಏಳುತ್ತಾನೆ ಅಂದರು, ಅದಕ್ಕೆ ಮಾರ್ಥಳು ಅದು ನನಗೆ
ಗೊತ್ತು ಪುನಾರುತ್ಥಾನದಲ್ಲಿ ಏಳುತ್ತಾನೆಂದು. ಅವಳು ತಿಳುಕೊಂಡಿದ್ದೆನೆಂದರೆ
ಅದು ಕಡೆಯ ದಿನದಲ್ಲಿ ನೇರವೇರುವುದೆಂದು. ಆದರೆ ಯೇಸು ಹೇಳಿದ್ದು ಅದು
ಬೇರೆಯಾಗಿತ್ತು.
6


ಯೇಸುವು ಮಾರ್ಥಳಿಗೆ ಹೇಳಿದ್ದೆನೆಂದರೆ
ನಾನೇ ಪುನಾರುತ್ಥಾನವು ಜೀವವು
ಆಗಿದ್ದೆನೆ. ನನ್ನನ್ನು ನಂಬುವವನು
ಸತ್ತರು ಬದುಕುತ್ತಾನೆ. ಆತನು ದೇವ
ಮಗನೆಂದು ಮಾರ್ಥಳು ನಂಬಿದಳು
ಆದರೆ ಆತನು ಲಾಜರನಿಗೆ ಹೇಗೆ
ಸಹಾಯ ಮಾಡಬಲ್ಲ?
7


ಲಾಜರನ ಸತ್ತಿದ್ದಕ್ಕಾಗಿ ಎಲ್ಲರಿಗೂ ಬೇಸರವುಂಟಾಯಿತು. ಮರಿಯಳು ಬಹಳ
ಅಳುತ್ತಿದ್ದಳು ಮತ್ತು ಸ್ನೇಹಿತರು ಅವರನ್ನು ಸಂತೈಸಲು ಪ್ರಯತ್ನಿಸುತ್ತಿದ್ದರು.
8


ಯೇಸು ಜನರೊಂದಿಗೆ
ಸಮಾಧಿಯ ಬಳಿಗೆ ಹೋದನು
ಆದರೆ ಸಮಾಧಿಯ ಬಾಗಿಲನ್ನು
ಒಂದು ಕಲ್ಲಿನಿಂದ ಮುಚ್ಚಿದ್ದರು.
9
ಯೇಸು ಆ ಕಲ್ಲನ್ನು ತಗೆಯಿರಿ ಎಂದು ಅಪ್ಪಣೆ
ಕೊಟ್ಟನು, ಆಗ ಮಾರ್ಥಳು ಸ್ವಾಮಿ
ಅವನು ಸತ್ತು ನಾಲ್ಕು ದಿನವಾಗಿದೆ
ಆದುದ್ದರಿಂದ ನಾತ
ಬರುತ್ತಿದೆ
ಅಂದಳು.
10
ಯೇಸುವಿನ
ಅಪ್ಪಣೆಯಂತೆ ಆ ಕಲ್ಲನ್ನು
ತಗೆಯಲಾಯಿತು. ಯೇಸುವು
ತನ್ನ ಪರಲೋಕದ ತಂದೆಗೆ
ಪ್ರಾರ್ಥನೆಯನ್ನು ಮಾಡಿದನು ಮತ್ತು
ಆತನನ್ನು ದೇವರು ಕಳಿಸಿದ್ದಾನೆಂದು
ಅವರು ತಿಳಿದುಕೊಳ್ಳಲು ಯೇಸು ಆ
ಜನರ ಮಧ್ಯದಲ್ಲಿ ಆದ್ಬುತವನ್ನು
ಮಾಡಬೇಕಾಗಿತ್ತು.
11
ಲಾಜರನೆ ಎದ್ದು ಬಾ
ಎಂದು ಯೇಸು ಜೋರಾಗಿ
ಕೂಗಿದನು, ಸತ್ತ ಮನುಷ್ಯನು
ಜೀವದಿಂದೆದ್ದು ಬರಬಹುದೆ
ಎಂದು ಜನರು
ದಿಗ್ಭ್ರಮೆಗೊಂಡರು?
12
ನಾರು
ಬಟ್ಟೆಯಲ್ಲಿ
ಸುತ್ತಿದವನ
ಹಾಗೆಯೇ
ಲಾಜರನು
ಎದ್ದು
ಬಂದನು.
13
ಬಟ್ಟೆಯನ್ನು ತಗೆಯಿರಿ
ಆತನು ಹೋಗಲಿ ಎಂದು
ಯೇಸುವು ಹೇಳಿದನು.
14

ಅಲ್ಲಿರಿವ ದುಖಃವು ಮಾರ್ಪಟ್ಟು ಸಂತೋಷವಾಯಿತು, ಯೇಸು ಹೇಳಿದಂತೆ ಮಾಡಿದನು. ದೇವರ ಮಗನು ಮಾತ್ರವೇ ಸತ್ತವರಿಗೆ ಜೀವವನ್ನು ಕೊಡಲು ಶಕ್ತರಾಗಿದ್ದಾನೆ.



15

ಆ ಆದ್ಬುತವನ್ನು ನೋಡಿದ ಜನರು ಯೇಸುವಿನ ಮೇಲೆ ನಂಬಿಕೆಯನ್ನಿಟ್ಟರು, ಆದರೆ ಇನ್ನೂ ಕೆಲವರು ಆತನ ವೈರಿಗಳಿಗೆ ತಿಳಿಸಿದರು. ಆ ಸುದ್ದಿಯನ್ನು ಕೇಳಿದ ಆಲಯದಲ್ಲಿರುವ ನಾಯಕರು ಯೇಸುವನ್ನು ಕೊಲ್ಲಲು ಹೊಂಚುಹಾಕಿದರು. ಇದನ್ನು ತಿಳಿದ ಯೇಸುವು ಅವರಿಂದ ಸಲ್ಪ ದೂರವಾದನು.



16

ಯೇಸು ಮತ್ತು ಲಾಜರನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಯೋಹಾನ, 11

**“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”**
**ಕೀರ್ತನೆ 119:130**

17

# ಮುಕ್ತಾಯ

52 60

18

**ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.**

**ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.**

**ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:**
**ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.**

**ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!**
**ಯೋಹಾನ 3:16**

19